# ಕಳ್ಳ – ಪೊಲೀಸ್ ಆಟ!

ಪೊಲೀಸ್ ಪಾತ್ರದ ರೇಸ್‌ಗೆ ಬಿದ್ದಿರುವ ಬಾಲಿವುಡ್ ನಟರ ಸಂಖ್ಯೆ ದೊಡ್ಡದು. 'ದಬಾಂಗ್', 'ಸಿಂಗಂ'ನಂಥ ಚಿತ್ರಗಳು ದೊಡ್ಡ ಯಶಸ್ಸು ಕಂಡ ಬಳಿಕವಂತೂ ಅನೇಕ ನಟರು ತಾವೂ ಪೊಲೀಸ್ ಪಾತ್ರದಲ್ಲಿ ವಿಜೃಂಭಿಸಬೇಕೆಂದು ಹಪಹಪಿಸುತ್ತಿದ್ದಾರೆ. ಆದರೆ ಬಾಲಿವುಡ್ ಬಾದ್‌ಷಾ ಶಾರೂಖ್ ಖಾನ್ ಮಾತ್ರ ಪೊಲೀಸ್ ವೇಷದಿಂದ ದೂರ.

24 ವರ್ಷದ ತಮ್ಮ ವೃತ್ತಿ ಬದುಕಿನಲ್ಲಿ ಶಾರೂಖ್ ಒಮ್ಮೆಯೂ ಪೊಲೀಸ್ ಪಾತ್ರದಲ್ಲಿ ಕಾಣಿಸಿಕೊಳ್ಳದಿರುವುದು ವಿಶೇಷವೇ ಸರಿ. ಅದಕ್ಕೆ ಅವರೇ ನೀಡುವ ಕಾರಣ ಏನೆಂದರೆ 'ನಾನು ಕಳ್ಳನಂತೆ ಕಾಣಿಸುತ್ತೇನೆ' ಎಂದು! 'ಪೊಲೀಸ್ ದಿರಿಸು ನನಗೆ ಹೊಂದಿಕೆಯಾಗುವುದಿಲ್ಲ. ನನ್ನ ಮುಖದಲ್ಲಿರುವುದು ಕಳ್ಳನ ಚಹರೆ' ಎಂದು ಕಿಂಗ್ ಖಾನ್ ನಗುತ್ತಾರೆ!

ಇದುವರೆಗೂ ಸೇನಾಧಿಕಾರಿ ಸಹಿತ ವಿವಿಧ ಪಾತ್ರಗಳಲ್ಲಿ ಶಾರೂಖ್ ಕಾಣಿಸಿಕೊಂಡಿದ್ದಾರೆ. ಆದರೆ ಪೊಲೀಸ್ ಪಾತ್ರದ ಕಥೆ ತಮ್ಮ ಬಳಿ ಒಮ್ಮೆಯೂ ಬಂದಿಲ್ಲ ಎನ್ನುತ್ತಾರೆ ಅವರು. 'ತೆರೆಯ ಮೇಲೆ ಅನೇಕ ಬಾರಿ ಕಳ್ಳನಾಗಿ ಕಾಣಿಸಿಕೊಂಡಿದ್ದೇನೆ. ಆ ತುಂಟ ಕಳ್ಳನನ್ನು ಜನರೂ ಇಷ್ಟಪಟ್ಟಿದ್ದಾರೆ. ಬಹುಶಃ ನಾನು ಪೊಲೀಸ್‌ನಂತೆ ಕಾಣಿಸುವುದಿಲ್ಲ. ಕಳ್ಳನಂತೆ ಕಾಣಿಸುವ ಕಾರಣಕ್ಕೇ ನಾನು ಸಿಂಗಂ ಅಥವಾ ಚುಲ್‌ಬುಲ್ ಪಾಂಡೆ ಆಗಲಿಲ್ಲ' ಎಂದು ತಮಾಷೆಯಾಗಿ ಹೇಳಿಕೊಂಡಿದ್ದಾರೆ ಅವರು.

ಅಂದ ಹಾಗೆ, ಶಾರೂಖ್ ನಿರ್ಮಾಣ, ನಟನೆಯ 'ಹ್ಯಾಪಿ ನ್ಯೂ ಇಯರ್' ಬಾಲಿವುಡ್‌ನಲ್ಲಿ ಹೊಸ ದಾಖಲೆ ನಿರ್ಮಿಸಿದೆ. ಚಿತ್ರ ₹300 ಕೋಟಿಗೂ ಮೀರಿ ಗಳಿಕೆ ಕಾಣುವ ಮೂಲಕ ಹಳೆಯ ದಾಖಲೆಗಳನ್ನೆಲ್ಲಾ ಮುರಿದಿದೆ. ಅದರ ನಡುವೆಯೇ 'ಧೂಮ್' ಸರಣಿಯ ನಾಲ್ಕನೇ ಚಿತ್ರದಲ್ಲಿ ಶಾರೂಖ್ ಬಣ್ಣಹಚ್ಚಲಿದ್ದಾರೆ ಎಂಬ ಸುದ್ದಿ ಬಂದಿದೆ. ಜಾನ್ ಅಬ್ರಹಾಂ, ಹೃತಿಕ್ ರೋಷನ್ ಮತ್ತು ಅಮೀರ್ ಖಾನ್ ಬಳಿಕ ಕಿಂಗ್‌ಖಾನ್ ಕೂಡ ಮುಖ್ಯ ಖಳನಾಯಕನಾಗಿ ನಟಿಸಬೇಕೆಂಬ ಬಯಕೆ ವ್ಯಕ್ತಪಡಿಸಿದ್ದಾರೆ. ನಾಯಕನಟರು ಪ್ರಚಂಡ ಖಳನಾಯಕನಾಗಿಯೂ ಜನರನ್ನು ರಂಜಿಸಬಲ್ಲರು ಎಂಬುದು ಸಾಬೀತಾಗಿದೆ. ಅತ್ತ ಪೊಲೀಸ್ ಪಾತ್ರಕ್ಕೆ ಪೈಪೋಟಿ, ಇತ್ತ ಕಳ್ಳನಾಗಲೂ ನಾಯಕ ನಟರ ನಡುವೆ ಸ್ಪರ್ಧೆ. ಬಾಲಿವುಡ್ ಅಂಗಳದಲ್ಲಿ ಕಳ್ಳ–ಪೊಲೀಸರ ಆಟ ಜೋರಾಗಿದೆ!



# ವಿವಾನ್–ಅಕ್ಷರಾ ಪ್ರೀತಿ





ಮೊದಲ ಚಿತ್ರ ಇನ್ನೂ ತೆರೆ ಕಾಣದಿದ್ದರೂ ಸುದ್ದಿಯಲ್ಲಿದ್ದಾರೆ ನಟ ಕಮಲ ಹಾಸನ್ ಅವರ ಎರಡನೇ ಪುತ್ರಿ ಅಕ್ಷರಾ ಹಾಸನ್. ನಾಸಿರುದ್ದೀನ್ ಶಾರ ಪುತ್ರ ವಿವಾನ್ ಶಾ ಮತ್ತು ಅಕ್ಷರಾ ಜೊತೆಯಲಿ ಜೊತೆ ಜೊತೆಯಲಿ ಎಂಬಂತೆ ಸುತ್ತಾಟ ನಡೆಸುತ್ತಲೇ ಇದ್ದಾರೆ. ಇಬ್ಬರದೂ ಪ್ರೇಮವೇ ಅಥವಾ ಬರಿಯ ಸ್ನೇಹವೇ ಎಂಬುದಿನ್ನೂ ಅಧಿಕೃತವಾಗಿ ಗೊತ್ತಾಗಿಲ್ಲ.

ಇಬ್ಬರದೂ ಸ್ನೇಹ ಮಾತ್ರವಲ್ಲ ಅದರಾಚೆಗೂ ಬಾಂಧವ್ಯ ಬೆಳೆದಿದೆ ಎನ್ನುವುದು ಗಾಳಿಮಾತು. ಹಾಗಂತ ಅದನ್ನು ಗಾಳಿಮಾತೆಂದು ಸುಮ್ಮನೆ ತಳ್ಳಿಹಾಕಲೂ ಆಗುವುದಿಲ್ಲ. 'ಹ್ಯಾಪಿ ನ್ಯೂ ಇಯರ್'ನಲ್ಲಿ ಎಲ್ಲರ ಗಮನ ಸೆಳೆದಿರುವ ವಿವಾನ್, ಬಣ್ಣದ ಬದುಕಿನ ಹೊಸ ಸಾಧ್ಯತೆಗಳನ್ನು ಹುಡುಕಲು ಪ್ರಾರಂಭಿಸಿದ್ದಾರೆ. ಅದರ ಕುರಿತು ನಾಸಿರುದ್ದೀನ್ ಶಾ ಅವರನ್ನು ಕೇಳಿದರೆ, 'ಅಕ್ಷರಾ ಒಳ್ಳೆಯ ಹುಡುಗಿ. ನಾನೂ ಸಹ ಇಬ್ಬರನ್ನೂ ಒಟ್ಟಿಗೆ ಹಲವು ಬಾರಿ ನೋಡಿದ್ದೇನೆ. ಹಾಗಂತ ಅವರ ಸಂಬಂಧದ ಬಗ್ಗೆ ಮಾತನಾಡಲು ಇಚ್ಛಿಸುವುದಿಲ್ಲ. ಅದರ ಬಗ್ಗೆ ನೀವು ವಿವಾನ್‌ನನ್ನೇ ಕೇಳಬೇಕು' ಎಂದು ಜಾರಿಕೊಳ್ಳುತ್ತಾರೆ.

ವಿವಾನ್ ಸಹ ತಮ್ಮ ಸಂಬಂಧವನ್ನು ಬಹಿರಂಗವಾಗಿ ಒಪ್ಪಿಕೊಂಡಿಲ್ಲ. ಅದರ ಬಗ್ಗೆ ಮಾತನಾಡುವುದೂ ಇಲ್ಲ ಎನ್ನುತ್ತಾರೆ ಅವರು. ತಮ್ಮ ಹುಟ್ಟುಹಬ್ಬಕ್ಕೆ ಬಂದಿದ್ದ ವಿವಾನ್‌ರನ್ನು ಅಕ್ಷರಾ, ಅಕ್ಕ ಶ್ರುತಿ ಮತ್ತು ಕೆಲವು ಆತ್ಮೀಯ ಗೆಳೆಯರಿಗೆ ಪರಿಚಯ ಮಾಡಿಕೊಟ್ಟಿದ್ದರಂತೆ. ಒಂದು ಕಾಲದಲ್ಲಿ ಚಿತ್ರರಂಗದಲ್ಲಿ ಮಿಂಚು ಹರಿಸಿದ್ದ ನಟಿ ರತಿ ಅಗ್ನಿಹೋತ್ರಿ ಅವರ ಮಗ ತನುಜ್ ವಿರ್ವಾನಿ ಅವರೊಂದಿಗೂ ಅಕ್ಷರಾ ಹೆಸರು ಒಮ್ಮೆ ಕೇಳಿಬಂದಿತ್ತು. ವಿವಾನ್ ಜತೆ ಅಕ್ಷರಾ ಕಾಣಿಸಿಕೊಳ್ಳತೊಡಗಿದ ನಂತರ ರೂಮರ್‌ಗಳ ಹಾದಿ ಬದಲಾಯಿತು.

■ ಅಮಿ